ಖಂಡಿತಾ. ನಾವು ಚೆಂಬುಡಿರ ದಶಗಣಪತಿಯನ್ನು ಭೇಟಿಯಾಗುವ. ಆತನಿರೋದು ಮಲೆತಿರಕೆ ಬೆಟ್ಟದ ಸಮೀಪದಲ್ಲಿ." ಸೆನೆಟರ್ ಶೂ ಖರೀದಿದಾರರ ಪಟ್ಟಿಯಲ್ಲಿ ಕಣ್ಣಾಡಿಸುತ್ತಾ ಕರಮಚಂದ ಉದ್ಗರಿಸಿದ.

ಸಂಜೆ ನಾಲ್ಕೂವರೆಯ ಹೊತ್ತಿಗೆ ನಾವಲ್ಲಿಗೆ ಹೋದೆವು. ಬಂದ ಉದ್ದೇಶ ಅರುಹಿದಾಗ, ದಶಗಣಪತಿಯ ಮೊಗದಲ್ಲಿ ಅಚ್ಚರಿ.

"ಅಲ್ಲಾ ಸಾರ್, ನಿಮ್ಗೆ ಶೂ ಕಳವಿನ ವಿಷ್ಯ ಅಷ್ಟು ಬೇಗ ಹೇಗೆ ಗೊತ್ತಾಯ್ತು? ಇವತ್ತು ಮಧ್ಯಾಹ್ನವಷ್ಟೇ ಆ ಕಳ್ಳ ಇಲ್ಲಿಗೂ ಬಂದಿದ್ದ. ಏನೋ ಸದ್ದು ಕೇಳಿ, ನಾನು ಹೊರಬಂದು ನೋಡಿದಾಗ, ಒಬ್ಬಾತ, ಕೈಯನ್ನು ಮುಂದಕ್ಕೆ ಚಾಚಿ, ಕುರುಡರ ತರಹ ನಟಿಸುತ್ತಾ, ಒಳ ಬರುತ್ತಿದ್ದ. ನಾನು ಮಹಡಿಯಿಂದ ಇಳಿದು ಬರುವಾಗ ಆತ ಶೂಸ್ಟ್ಯಾಂಡಿನ ಬಾಗಿಲು ತೆಗೆಯುತ್ತಿದ್ದ. ಆತನ ಕೈಯಲ್ಲಿ ಏನೋ ಒಂದು ವಸ್ತುವಿತ್ತು. ಅದೇನೆಂಬುದು ನನ್ಗೆ ಗೊತ್ತಾಗಲಿಲ್ಲ. ನನ್ನನ್ನು ಕಂಡ ತಕ್ಷಣ, ಕಾಲುಕಿತ್ತ."

ದಶಗಣಪತಿಯ ವಿವರಣೆ ಕೇಳಿದಾಗ, ಕರಮಚಂದ ಕಿರು ನಕ್ಕ. ನಾವು ಶೂ ಸ್ಟ್ಯಾಂಡನ್ನು ಪರಿಶೀಲಿಸಿದೆವು. ಆತನ ಹೊಸ ಸೆನೆಟರ್ ಶೂ ಕಪ್ಪು ಬಣ್ಣದ್ದು. ಅದನ್ನು ಕೂಲಂಕಷವಾಗಿ ಕರಮಚಂದ ಪರೀಕ್ಷಿಸುವಾಗ, ದಶಗಣಪತಿ ಮಾತು ಸೇರಿಸಿದ,

"ಹೊಸಾ ಶೂ ಸಾರ್. ಖರೀದಿ ಮಾಡಿ ಮೂರು ವಾರ ಆಯ್ತು. ಅದನ್ನ ಹಾಕಿಕೊಂಡಿದ್ದು ಒಮ್ಮೆ ಮಾತ್ರ. ಅಯ್ಯಪ್ಪ ಸ್ವಾಮಿ ಗುಡಿಗೆ ಪುತ್ತರಿ ಹಬ್ಬಕ್ಕೆ ಹೋದಾಗ. ಅದೂ ಕಾರಿನಲ್ಲೇ ಹೋಗಿದ್ದು. ಶೂ ಹಾಕ್ಕೊಂಡು ನಾಲ್ಕು ಹೆಜ್ಜೆ ಹಾಕಿದ್ದಷ್ಟೇ."

"ಉತ್ಸವಕ್ಕೆ ಹೊಸಾ ಶೂ ಹಾಕಿಕೊಂಡು ಹೋದ್ರಾ? ದೇವಸ್ಥಾನದಲ್ಲಿ ಚಪ್ಪಲಿ ಕಳವಾಗುವುದು ಜಾಸ್ತಿ, ಅಲ್ವೇ?"

"ನೀವ್ ಹೇಳೋದು ನಿಜ. ನನ್ಗೂ ಶೂ ಅದಲುಬದಲು ಆಯ್ತಾ ಅನುಮಾನವಾಯ್ತು. ಯಾಕಂದ್ರೆ, ಹೆಚ್ಚಾಗಿ ನಾನು ಶೂ ತೆಗೆದಿರಿಸುವಾಗ ಉಲ್ಟಾ ಇರಿಸೋದು. ಬಲಗಾಲಿನ ಶೂವನ್ನು ಎಡದಲ್ಲಿ, ಎಡಗಾಲಿನದ್ದನ್ನು ಬಲದಲ್ಲಿ. ಅರ್ಥವಾಯ್ತಾ? ಕೆಲವು ಬೆಪ್ಪುತಕ್ಕಡಿಗಳು ಇರ್ತಾವೆ. ಅವಕ್ಕೆ ತಮ್ ಚಪ್ಪಲಿ ಯಾವ್ದು, ಇನ್ನೊಬ್ಬರದ್ದು ಯಾವ್ದು ಎಂಬ ಪ್ರಜ್ಞೆಯೇ ಇರೋದಿಲ್ಲ. ಅಂತಹವಕ್ಕೆ ಗೊತ್ತಾಗಲಿ ಅಂತ ಚಪ್ಪಲಿಗಳನ್ನು ಆಚೀಚೆ ಮಾಡಿ ಇಡೋದು. ಈ ಸಾರೀನೂ ಶೂಗಳನ್ನು ಹಾಗೇ ಇಟ್ಟ ನೆನಪು. ಆದ್ರೆ ದೇವಸ್ಥಾನದಿಂದ ವಾಪಸು ಬರೋವಾಗ, ಅವು ಹಾಗಿರಲಿಲ್ಲ. ಉಲ್ಟಾ ಇಡಲು ಮರೆತಿರಬೇಕು ಅಂದ್ಕೊಂಡೆ. ಆ ದಿವಸವೇ, ಇನ್ನೊಬ್ಬನೂ ಅಂತಹದೇ ಹೊಸ ಶೂ ಹಾಕಿಕೊಂಡು ಬಂದಿರುವ ಸಾಧ್ಯತೆ ಕಡಿಮೆ ಅನ್ನಿಸ್ತು."

"ನೀವನ್ನೋದು ಸರಿ."

ನಾವು ಅಲ್ಲಿಂದ ಹಿಂದಿರುಗುವಾಗ, ಕರಮಚಂದ ತನಗೆ ನಗರಸಭೆಯಲ್ಲಿ ತುರ್ತಿನ ಕೆಲಸವೊಂದಿದೆ ಎಂದಿದ್ದರಿಂದ ಆತನನ್ನು ಅಲ್ಲಿ ಇಳಿಸಿ, ನಾನು, ಕಕ್ಷಿಗಾರರೊಬ್ಬರನ್ನು ಭೇಟಿಯಾಗಲು ಕಚೇರಿಗೆ ಹಿಂದಿರುಗಿದೆ.

★★★

ಸುಮಾರು ಎಂಟು ಗಂಟೆಯ ಹೊತ್ತಿಗಷ್ಟೇ ಹಿಂದಿರುಗಿದ ಕರಮಚಂದ ಆತುರದಲ್ಲಿ ಹೇಳಿದ, "ಬಿದ್ದಪ್ಪ, ಬೇಗ ಊಟ ಮುಗಿಸುವ. ಈ ರಾತ್ರಿ ನಾವು ಜಾಗರಣೆ ಮಾಡಬೇಕಾಗಬಹುದು!"

ಅವನ ಮಾತು ನನಗೆ ಅರ್ಥವಾಗಲಿಲ್ಲ. ನನ್ನ ಅಚ್ಚರಿ ಕಂಡು, ಆತ ನಕ್ಕು ಹೇಳಿದ, "ರಾತ್ರಿ ನಿದ್ದೆ ಬಿಡಲು ಸಿದ್ಧನಿದ್ದೀಯಲ್ಲ. ಈ ಬೂಟಿನ ಪ್ರಕರಣಕ್ಕೆ ಒಂದು ತಿರುವು ಸಿಗುವ ಲಕ್ಷಣವಿದೆ".